RNU AIR DHARWAD

# FEBRUARY 22,2025
# ALL INDIA RADIO- DHARWAD
# PRADESH SAMACHARA (KANNADA) 12PM

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವವರು: ವಿವೇಕಾದಿತ್ಯ ಕನಿಯಾಲ**

<><><>

ಕನ್ನಡ ಸಾಹಿತ್ಯ ಪರಿ ’ತ್ ಮತ್ತು ಪತ್ರಕರ್ತರ ಸಂಘಕ್ಕೆ ಪ್ರಾರಂಭಿಕವಾಗಿ ದೇಣಿಗೆ ನೀಡಿ, ಈ ಸಂಸ್ಥೆಗಳು ಎತ್ತರಕ್ಕೆ ಬೆಳೆಯಲು ಕಾರಣರಾದವರು ನಾಲ್ವಡಿ ಕೃ ್ಣರಾಜ ಒಡೆಯರ್ ಎನ್ನುವುದು ಮರೆಯಲಾಗದ, ಅಭಿಮಾನದ ಸಂಗತಿಯಾಗಿದೆ ಎಂದು ಕನ್ನಡ ಸಾಹಿತ್ಯ ಪರಿ ’ತ್ ಅಧ್ಯಕ್ಷರಾದ, ನಾಡೋಜ ಮಹೇಶ್ ಜೋಶಿ ಅವರು ಅಭಿಪ್ರಾಯಪಟ್ಟರು. ಬೆಂಗಳೂರು ಕಂದಾಯ ಭವನದಲ್ಲಿರುವ ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘದ ಕಚೇರಿಗೆ ಭೇಟಿ ನೀಡಿದ ಅವರು, 1932ರಲ್ಲಿ ಡಿ.ವಿ ಗುಂಡಪ್ಪ ಅವರಿಂದ ಸ್ಥಾಪಿತವಾದ ಪತ್ರಕರ್ತರ ಸಂಘವು 93 ವಸಂತಗಳನ್ನು ಕಂಡಿರುವುದು ಹೆಮ್ಮೆಯ ಸಂಗತಿಯಾಗಿದೆ. ಕನ್ನಡ ಸಾಹಿತ್ಯ ಪರಿ ’ತ್ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದ ಡಿ.ವಿ.ಜಿಯವರು ಕನ್ನಡ ಸಾರಸ್ವತ ಲೋಕಕ್ಕೆ ಅನುಪಮ ಕೊಡುಗೆ ನೀಡಿದ್ದರು ಎಂದು ಸ್ಮರಿಸಿದರು.

<><><>

ಧಾರವಾಡ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನಗಳ ಸಂಸ್ಥೆ, ಡಿಮ್ಹಾನ್ಸ್, ಸ್ಟಾರ್ಟ ಅಪ್ ಕರ್ನಾಟಕ, ಕಿಟ್ಸ್ ಸಂಸ್ಥೆ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸಹಯೋಗದಲ್ಲಿ, ಇದೇ 24 ಮತ್ತು 25 ರಂದು, ಎರಡು ದಿನಗಳ ವಿಶೇಷ ವೈಜ್ಞಾನಿಕ ಬರೆವಣಿಗೆ ಕಾರ್ಯಾಗಾರ, ಆಯೋಜಿಸಿದೆ. ಡಿಮ್ಹಾನ್ಸ್ ಸಂಸ್ಥೆಯ ನಿರ್ದೇಶಕ ಡಾಕ್ಟರ್ ಅರುಣಕುಮಾರ ಸಿ. ಪ್ರದೇಶ ಸಮಾಚಾರಕ್ಕಾಗಿ, ಕಾರ್ಯಾಗಾರದ ಕುರಿತು, ಮಾಹಿತಿ ನೀಡಿದ್ದಾರೆ.

<><><>

ಡಾಕ್ಟರ್ ಅರುಣಕುಮಾರ ಸಿ. ಧ್ವನಿ 32 ಸೆಕೆಂದುಗಳು

<><><>

ಹುಬ್ಬಳ್ಳಿ ಹೊರವಲಯದ ಕುಸುಗಲ್ ರಸ್ತೆಯ ಮೈದಾನದಲ್ಲಿ ಎರಡು ದಿನಗಳ ಅಂತಾರಾಷ್ಟ್ರೀಯ ಗಾಳಿಪಟ ಉತ್ಸವ, ಕ್ರೀಡಾ ಹಾಗೂ ಸಾಂಸ್ಕೃತಿಕ ಮಹೋತ್ಸವ 2025, ಸಂಭ್ರಮ ಹಾಗೂ ಸಡಗರದೊಂದಿಗೆ ಜರುಗಿತು. ಬಾನಂಗಳದಲ್ಲಿ ವಿಶಿಷ್ಟ ಗಾಳಿಪಟ ಹಾರಾಟ ಹಾಗೂ ಪ್ರದರ್ಶನ ನೋಡುಗರ ಗಮನ ಸೆಳೆಯಿತು. ಉತ್ಸವದ ಪ್ರಯುಕ್ತ ದೇಸಿ ಕ್ರೀಡಾ ಸ್ಪರ್ಧೆಗಳು, ಮಲ್ಲಕಂಬ ಪ್ರದರ್ಶನ ಆಯೋಜಿತವಾಯಿತು.

<><><>

ಕನ್ನಡ ಸಾಹಿತ್ಯ ಲೋಕದ ಶಿಶು ಗೀತೆಗಳ ಜನಕ, ಸಣ್ಣ ಕಥೆಗಾರ ಪಂಜೆ ಮಂಗೇಶರಾವ ಅವರ ಜನ್ಮ ವಾರ್ಷಿಕ ದಿನವಿಂದು. ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಪಂಜೆ ಮಂಗೇಶರಾವ್ ಅವರು ನೀಡಿದ ಕೊಡುಗೆಗಳನ್ನು ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರು ಸ್ಮರಿಸಿ, ಶ್ಲಾಘಿಸಿದ್ದಾರೆ.
ತಮ್ಮ ಎಕ್ಸ್ ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿರುವ ಕೇಂದ್ರ ನವ ಹಾಗೂ ನವೀಕರಿಸಬಹುದಾದ ಇಂಧನ ಖಾತೆ ಸಚಿವರಾದ ಪ್ರಲ್ಹಾದ್ ಜೋಶಿಯವರು 'ಕವಿಶಿಷ್ಯ ಕಾವ್ಯನಾಮದಿಂದ ಖ್ಯಾತರಾದ ಪಂಜೆ ಮಂಗೇಶರಾಯರು, ಪ್ರಸಿದ್ಧ ಬಾಲಗೀತೆಗಳ ಕವಿಯಾಗಿದ್ದರು ಎಂದು ಸ್ಮರಿಸಿದ್ದು ತಮ್ಮ ಗೌರವ ನಮನಗಳನ್ನು ಸಲ್ಲಿಸಿದ್ದಾರೆ.

<><><>

ಸ್ವತಂತ್ರ ಭಾರತದ ಪ್ರಥಮ ಶಿಕ್ಷಣ ಸಚಿವ, ಭಾರತರತ್ನ ಮೌಲಾನಾ ಅಬುಲ್ ಕಲಾಮ್ ಆಝಾದ್ ಅವರ 66ನೇ ಪುಣ್ಯತಿಥಿ ಇಂದು. ಸ್ವಾತಂತ್ರ್ಯ ಸೇನಾನಿಯಾಗಿದ್ದ ಅಬುಲ್ ಕಲಾಮ್ ಆಝಾದ್, ಅಖಂಡ ಭಾರತದ ಕನಸು ಕಂಡ ಮುತ್ಸದ್ದಿ.

<><><>

ಮೈಸೂರಿನ ಮಹಾರಾಜರಾಗಿದ್ದ, 10ನೇ ಚಾಮರಾಜೇಂದ್ರ ಒಡೆಯರ್ ಅವರ 159ನೇ ಜಯಂತ್ಯುತ್ಸವ ಇಂದು. ಸ್ವಾಮಿ ವಿವೇಕಾನಂದರು, 1893ರ ಷಿಕ್ಯಾಗೋ ವಿಶ್ವ ಧರ್ಮ ಸಮ್ಮೇಳನದಲ್ಲಿ ಪಾಲ್ಗೊಳ್ಳಲು, ಹಣಕಾಸಿನ ಸಹಾಯ ಒದಗಿಸಿದವರು. ಕನ್ನಡ ಭಾಷೋಜ್ಜೀವಿನಿ ಶಾಲೆ ಸ್ಥಾಪಿಸಿದ ಹಿರಿಮೆ ಹೊಂದಿದ್ದಾರೆ.

<><><>

ಧಾರವಾಡದ ಸೃಜನಾ ರಂಗಮಂದಿರದಲ್ಲಿ ಆಯೋಜಿತ, ನಾಲ್ಕು ದಿನಗಳ ನಾಟಕ, ಸಂಗೀತ ಗಾಯನ ಹಾಗೂ ಉಪನ್ಯಾಸ ಕಾರ್ಯಕ್ರಮ- ನಿರ್ದಿಗಂತ ಉತ್ಸವಕ್ಕೆ, ಇಂದು ಚಾಲನೆ ದೊರಕಿತು. ಈ ಮಧ್ಯಾಹ್ನ 3 ಗಂಟೆಗೆ ಶ್ರೀಕೃಷ್ಣ ಪಾರಿಜಾತ ಬಯಲಾಟ ಜರುಗಲಿದೆ. ಸಂಜೆ 4 ಗಂಟೆಗೆ ಕೃಪಾಕರ ಮತ್ತು ಸೇನಾನಿ ಅವರು 'ನೆಲ-ಜಲ-ಬದುಕು' ಕುರಿತ ಉಪನ್ಯಾಸ ನೀಡಲಿದ್ದಾರೆ.

<><><>

ಮೈಸೂರಿನ, ಭಾರತೀಯ ಭಾ ೆ ಸಂಸ್ಥಾನದ ವತಿಯಿಂದ, ಅಂತಾರಾಷ್ಟ್ರೀಯ ಮಾತೃಭಾ ೆ ದಿನಾಚರಣೆ, ಜರುಗಿತು.

<><><>

ಮಂಗಳೂರು ಜಿಲ್ಲಾ 27ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ, ಚಾಲನೆ ದೊರೆತಿದೆ. ಸಾಹಿತಿ ಬಿ.ಪ್ರಭಾಕರ ಶಿಶಿಲ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದಾರೆ. ಅಸೈಗೋಳಿಯ ಮೈದಾನದಲ್ಲಿ, ಕನ್ನಡ ಸಾಂಸ್ಕೃತಿಕ ಮೆರವಣಿಗೆಗೆ, ಪದ್ಮಶ್ರೀ ಹರೇಕಳ ಹಾಜಬ್ಬ ಚಾಲನೆ ನೀಡಿದರು.

<><><>

ಬೆಂಗಳೂರು ವಿಧಾನಸೌಧದ, ಸಮ್ಮೇಳನ ಸಭಾಂಗಣದಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ವಾಣಿಜ್ಯ ಸಂಘ, ಸಂಸ್ಥೆಗಳ ಪ್ರತಿನಿಧಿಗಳು, ಅಬಕಾರಿ ಮಾರಾಟ ಸಂಘದ ಪದಾಧಿಕಾರಿಗಳ ಜೊತೆ, ಬೇಡಿಕೆಗಳ ಕುರಿತು, ಬಜೆಟ್ ಪೂರ್ವ ಸಭೆ ನಡೆಸಿದರು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ 1 ಗಂಟೆ 10 ನಿಮಿಷಕ್ಕೆ..